**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉತ್ತರ ಕನ್ನಡ, ಕಾರವಾರ**

# Spl.C No. 27/2020

ಫಿರ್ಯಾದಿ – ಸರ್ಕಾರ – ಮುಂಡಗೋಡ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಸಮೀರ @ ಮಲ್ಲಿಕಸಾಬ ತಂದೆ ನಬೀಸಾಬ್ ಶೇಖ
ಮತ್ತು ಇತರರು

## ದೋಷಾರೋಪಣೆ

**ಶ್ರೀ ಗಣೇಶ ಬಿ., ಬಿ.ಎಸ್.ಸಿ. ಎಲ್.ಎಲ್.ಎಂ. 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ ಆದ ನಾನು, ಆರೋಪಿತರಾದಃ**

ಆರೋಪಿತರು 1. ಸಮೀರ @ ಮಲ್ಲಿಕಸಾಬ ತಂದೆ ನಬೀಸಾಬ್ ಶೇಖ
ಪ್ರಾಯಃ 25 ವರ್ಷ, ಉದ್ಯೋಗಃ ಕೂಲಿ ಕೆಲಸ ,
ಸಾಃ ಗುಂಜಾವತಿ, ತಾಃ ಮುಂಡಗೋಡ.

2. ಜಮೀರ ತಂದೆ ನಬೀಸಾಬ್ ಶೇಖ
ಪ್ರಾಯಃ 21 ವರ್ಷ, ಉದ್ಯೋಗಃ ಕೂಲಿ ಕೆಲಸ ,
ಸಾಃ ಗುಂಜಾವತಿ, ತಾಃ ಮುಂಡಗೋಡ.

3. ಅಸೀಫ್ ತಂದೆ ಮೊಹಮ್ಮದ ಶೇಖ್
ಪ್ರಾಯಃ 25 ವರ್ಷ, ಉದ್ಯೋಗಃ
ಸಾಃ ಹುಲಿದೇವರವಾಡಾ, ಅಂಕೋಲಾ ತಾಃ ಕಾರವಾರ.

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ದಿನಾಂಕಃ 14-04-2019 ರಂದು ಗುಂಜಾವತಿ ಗ್ರಾಮದಲ್ಲಿನ ಗೌಸ ಮೊಹಿದ್ದಿನ ದರ್ಗಾದ ಮುಂದೆ ಹಾದು ಹೋದ ರಸ್ತೆಯಲ್ಲಿ 7 ನೇ ಸಾಕ್ಷಿ ಹಾಗೂ 8 ನೇ ಸಾಕ್ಷಿ ಮತ್ತು ಫಿರ್ಯಾದಿ (ಕಾಸಿಂ ಸಾಬ ತಂದೆ ಜುಮ್ಮಾ ಸಾಬ್ ಹಟ್ಟಿಮನಿ) ಇವರು ಸಿದ್ದಿ ಮುಸ್ಲಿಂ ಧರ್ಮದ

ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, 9 ನೇ ಸಾಕ್ಷಿ ( ಮುಸ್ತಾಕ್ ತಂದೆ ಜುಮ್ಮಾ ಸಾಬ್ ಹಟ್ಟಿಮನಿ) ಇವರು ಅವರ ಚಿಕ್ಕಮ್ಮನ ಮನೆಯ ಮದುವೆಗೆ ಬಂದಿದ್ದು , ಮದುವೆ ಮನೆಯಲ್ಲಿ ಊಟ ಬಡಿಸುತ್ತಿರುವಾಗ 1 ನೇ ಆರೋಪಿಯಾದ ನಿನಗೆ 9 ನೇ ಸಾಕ್ಷಿ ತೋಳಿದ ಪ್ಲೇಟನಲ್ಲಿ ಊಟ ಬಡಿಸುವಂತೆ ಹೇಳಿದಾಗ ಅದಕ್ಕೆ 3 ನೇ ಆರೋಪಿಯಾದ ನೀನು ಕೋಪಗೊಂಡು ಜಗಳ ಮಾಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 3(1)(W)(i) ಮತ್ತು 3(2)(v-a) ಎಸ್.ಸಿ/ಎಸ್.ಟಿ ಪ್ರಿವೆಂಶನ್ ಆಫ್ ಅಟ್ರಾಸಿಟಿಸ್ ಅಮೆಂಡಮೆಂಟ್ ಆಕ್ಟ 2015 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ.

ಎರಡನೆಯದಾಗಿ, ದಿನಾಂಕಃ 15-04-2019 ರಂದು 9 ನೇ ಸಾಕ್ಷಿಯ ( ಮುಸ್ತಾಕ್ ತಂದೆ ಜುಮ್ಮಾ ಸಾಬ್ ಹಟ್ಟಿಮನಿ) ಚಿಕ್ಕಮನಿಗೆ ಮಾತಾಡಿಕೊಂಡು ಹೊರಗೆ ಬರುತ್ತಿರುವಾಗ ಮನೆಯ ಹೊರಗೆ 1 ನೇ ಅರೋಪಿತನಾದ ನೀನು 4 ನೇ ಸಾಕ್ಷಿ ಇವರೊಂದಿಗೆ ನಿಂತಿದ್ದಾಗ 9 ನೇ ಸಾಕ್ಷಿ ಮುಸ್ತಾಕ್ ಇತನನ್ನು ನೋಡಿ ಮದುವೆ ದಿನ ತನ್ನ ಹತ್ತಿರ ಪ್ಲೇಟ ತೊಳೆದು ಕೊಡು ಅಂತಾ ಹೇಳಿದ್ದೀಯಾ ಅಂತಾ ಹೇಳಿ ಮುಸ್ತಾಕ ಇತನಿಗೆ ರಾಂಡಕೆ ಬೇಟೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸ್ಥಳದಲ್ಲಿ 1 ನೇ ಆರೋಪಿತನಾದ ನೀನು 9 ನೇ ಸಾಕ್ಷಿಗೆ ಅವಾಚ್ಯವಾಗಿ ಬೈದಿದ್ದು ಅಲ್ಲದೇ, ಆತನ ಮೇಲೆ ಏರಿ ಬಂದು ಕೆನ್ನೆಯ ಮೇಲೆ ಕೈಯಿಂದ ಹೊಡೆದು ನೋವು ಪಡಿಸಿದ್ದು, ನಂತರ 9 ನೇ ಸಾಕ್ಷಿಗೆ ಹೊಡೆದ ವಿಷಯ ತಿಳಿದು ರಾತ್ರಿ ಸುಮಾರು 08.00 ಗಂಟೆಗೆ ಫಿರ್ಯಾದಿ ಹಾಗೂ ಸಾಕ್ಷಿದಾರ ನಂಬರ 7, 8 ಮತ್ತು 11 ರವರು 1 ನೇ ಅರೋಪಿತನಾದ ನಿನ್ನನ್ನು ಕೇಳುತ್ತಿದ್ದಾಗ ಆರೋಪಿಗಳಾದ ನೀವೆಲ್ಲರೂ ಸೇರಿ ಫಿರ್ಯಾದಿ ಮತ್ತು ಸಾಕ್ಷಿದಾರರಾದ ಮಾಬುಬು, ಮುಸ್ತಾಕ ಮತ್ತು ರಜಾಕ ಇವರಿಗೆ ದೂಡಾಡಿದ್ದು, 1 ನೇ ಅರೋಪಿತನಾದ ನೀನು ಫಿರ್ಯಾದಿ ತಮ್ಮನಾದ 8 ನೇ ಸಾಕ್ಷಿಗೆ ಕೈಯಿಂದ ಮುಷ್ಠಿ ಕಟ್ಟಿ ಮೂಗಿಗೆ ಹೊಡೆದು ಸಾದಾ ಸ್ವರೂಪದ ರಕ್ತಗಾಯ ಪಡಿಸಿದ್ದು ಅಲ್ಲದೇ ಬಿಡಿಸಲು ಬಂದ ಫಿರ್ಯಾದಿ ಇವರಿಗೆ ಆರೋಪಿಗಳಾದ ನೀವೆಲ್ಲರೂ ಸೇರಿ ಕೈಯಿಂದ ಮೈ ಮೇಲೆ ಹೊಡೆದು ಆತನು ಧರಿಸಿದ ಶರ್ಟನ್ನು ಹರಿದು ಹಾಕಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ

ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ .

ಕೊನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು 1 ರಿಂದ 3 ನೇ ಆರೋಪಿಗಳಾದ ನೀವು ನಿಮ್ಮ ಉದ್ದೇಶದ ಮುಂದುವರಿಕೆಯಲ್ಲಿ ಫಿರ್ಯಾದಿ ತಾಯಿಯಾದ ಮಾಬೂಬಿ ಇವರಿಗೆ 2 ಮತ್ತು 3 ನೇ ಆರೋಪಿಗಳಾದ ನೀವು ಆಕೆಯನ್ನು ದೂಡಾಡಿ ಕೈ ತಿರುಗಿಸಿ ಹೊಡೆದು ಆಕೆಯ ಮಾನಕ್ಕೆ ಕುಂದುಂಟು ಮಾಡಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 34 ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಮಾಡಿರುವಿರಿ .

ಆರೋಪಿಯಾದ ನೀವು ಮೇಲ್ಕಂಡ ಆರೋಪಗಳಿಗೆ ಇದೇ ನ್ಯಾಯಾಲಯದಲ್ಲಿ, ನನ್ನ ಮುಂದೆ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಿರ್ದೇಶಿಸಿರುತ್ತೇನೆ.

(ಗಣೇಶ ಬಿ.,)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

ದಿನಾಂಕಃ 15-07-2022

## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## Spl.C No. 27/2020

ಫಿರ್ಯಾದಿ – ಸರ್ಕಾರ – ಮುಂಡಗೋಡ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಸಮೀರ @ ಮಲ್ಲಿಕಸಾಬ ತಂದೆ ನಬೀಸಾಬ್ ಶೇಖ
ಮತ್ತು ಇತರರು

## ದೋಷಾರೋಪಣೆ

| | |
|---|---|
| 1 ನೇ ಆರೋಪಿಯ ಹೆಸರು | – ಸಮೀರ @ ಮಲ್ಲಿಕಸಾಬ ಶೇಖ |
| ತಂದೆಯ ಹೆಸರು | – ನಬೀಸಾಬ್ ಶೇಖ |
| ವಯಸ್ಸು | – 25 ವರ್ಷ |
| ಉದ್ಯೋಗ | – ಕೂಲಿ ಕೆಲಸ |
| ವಾಸ | – ಗುಂಜಾವತಿ, ತಾಃ ಮುಂಡಗೋಡ. |

## ಆರೋಪಿಯ ಹೇಳಿಕೆ

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ತಿಳಿಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 15-07-2022

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

## ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ

## **Spl.C No**. 27/2020

ಫಿರ್ಯಾದಿ – ಸರ್ಕಾರ – ಮುಂಡಗೋಡ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಸಮೀರ @ ಮಲ್ಲಿಕಸಾಬ ತಂದೆ ನಬೀಸಾಬ್ ಶೇಖ
ಮತ್ತು ಇತರರು

## ದೋಷಾರೋಪಣೆ

2 ನೇ ಆರೋಪಿಯ ಹೆಸರು – ಜಮೀರ ಶೇಖ

ತಂದೆಯ ಹೆಸರು – ನಬೀಸಾಬ್ ಶೇಖ

ವಯಸ್ಸು – 21 ವರ್ಷ

ಉದ್ಯೋಗ – ಕೂಲಿ ಕೆಲಸ

ವಾಸ – ಗುಂಜಾವತಿ, ತಾಃ ಮುಂಡಗೋಡ.

## ಆರೋಪಿಯ ಹೇಳಿಕೆ

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ತಿಳಿಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 15-07-2022 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ

# <u>ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉತ್ತರ ಕನ್ನಡ , ಕಾರವಾರ</u>

## **Spl.C No**. 27/2020

ಫಿರ್ಯಾದಿ – ಸರ್ಕಾರ – ಮುಂಡಗೋಡ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ – ಸಮೀರ @ ಮಲ್ಲಿಕಸಾಬ ತಂದೆ ನಬೀಸಾಬ್ ಶೇಖ
ಮತ್ತು ಇತರರು

## <u>ದೋಷಾರೋಪಣೆ</u>

3 ನೇ ಆರೋಪಿಯ ಹೆಸರು – ಅಸೀಫ್ ಶೇಖ

ತಂದೆಯ ಹೆಸರು – ಮೊಹಮ್ಮದ್ ಶೇಖ

ವಯಸ್ಸು – 25 ವರ್ಷ

ವಾಸ – ಹುಲಿದೇವರವಾಡಾ, ತಾಃ ಅಂಕೋಲಾ.

## <u>ಆರೋಪಿಯ ಹೇಳಿಕೆ</u>

ಪ್ರಶ್ನೆಃ ನಿನ್ನ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿನಗೆ ತಿಳಿಯಿತೆ?
ಉತ್ತರಃ ತಿಳಿಯಿತು.

ಪ್ರಶ್ನೆಃ ನೀನು ತಪ್ಪು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀಯಾ ?
ಉತ್ತರಃ ವಿಚಾರಣೆ ಆಗಬೇಕು.

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 15-07-2022 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ, ಕಾರವಾರ